# KARNATAKA POWER TRANSMISSION CORPORATION LIMITED

(Corporate Identity Number (CIN): U40109KA1999SGC025521)

ONLINE APTITUDE TEST- REVISION OF FINAL ANSWER KEYS, SCORES & REVISED 1:2 List

## NOTIFICATION

**No: KPTCL/B16/40360/2016-17** **Date: 13 NOV 2017**

**Sub:** Publishing of Revised Answer Keys, Revised Scores/Equi-percentile of the Online Aptitude Test, Revised 1:2 shortlist of candidates for the posts of Assistant Engineer(Elec.), Assistant Accounts Officer & Assistant - Reg.

**Ref:**
1. Employment Notification No: KPTCL/B16/40360/2016-17 dated: 08.09.2016.
2. Online Aptitude Test Notification No: KPTCL/B16/40360/2016-17 dated: 23.06.2017.
3. Challenging of Questions & Answers Keys Notification No: KPTCL/B16/40360/2016-17 dated: 14.07.2017.
4. Publishing of final answer keys, Scores of On-line Aptitude test & 1:2 shortlist of candidates in Notification No: KPTCL/B16/40360/2016-17 dated: 23.08.2017 and 30.08.2017.

*******

The Final answer Keys, Scores of the Online Aptitude Test held from 07.07.2017 to 11.07.2017 and 1:2 shortlist of candidates and cut-off marks/Equi-percentile for the post of Assistant Engineer (Elec.), Assistant Accounts Officer and Assistant was published in Notification dated: 23.08.2017 and 30.08.2017.

Later on, some of the candidates had represented stating that the challenges submitted along with supporting documents to some of the key answers were not considered. **As some of the challenges merited re-consideration and re-examination, the final answer Keys to some of the questions of the On-line Aptitude Test for the post of Assistant Engineer (Elec.), Assistant Accounts Officer and Assistant have been revised. Consequent to revision of the final answer keys leading to modification in the scores, the 1:2 short list of candidates published earlier in Notification dated: 23.08.2017 for the post of Assistant Engineer (Elec.) & Assistant Accounts Officer and for the post of Assistant published in Notification dated: 30.08.2017 is hereby withdrawn** and **the revised answer Keys** have been uploaded in KPTCL and ESCOMs Websites (www.kptcl.com, www.bescom.org, www.cescmysore.org, www.hescom.co.in and www.gescom.in) as Annexure-1. The candidates can view their **revised scores/Equi-Percentile** by logging in the concerned company websites with their Application ID and Date of Birth.

Further, the revised short list of candidates in the ratio of 1:2 for the notified posts of Assistant Engineer (Elec.), Assistant Accounts Officer and Assistant for the purpose of verification of documents is published in Annexure-2. The revised cut-off marks/Equi-percentile is published in Annexure-3.

**The candidates may note that the said list is not a selection list. The date of verification of original documents and testimonials will be notified shortly.**

**There is no change in the Final answer Keys, Scores /Equi-percentile and in the 1:2 shortlist of candidates/Cut-off marks/ Equi-percentile published earlier for the post of Junior Engineer (Elec./Civil) and Junior Assistant.**

**Director (Admn. & HR)**
**Corporate Office, KPTCL,**
**Kaveri Bhavan, Bengaluru.**

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(Corporate Identity Number (CIN): U40109KA1999SGC025521)

**ಆನ್‌ಲೈನ್ ಸ್ಪರ್ಧಾತ್ಮಕ ಪರೀಕ್ಷೆ – ಪರಿಷ್ಕೃತ ಅಂತಿಮ ಉತ್ತರಗಳ ಕೀ, ಅಂಕಗಳು, 1:2 ಪಟ್ಟಿ**

## ಅಧಿಸೂಚನೆ

**ಸಂಖ್ಯೆ: ಕವಿಪ್ರನಿನಿ/ಬಿ16/40360/2016–17** **ದಿನಾಂಕ: 13.11.2017**

**ವಿಷಯ:** ಸಹಾಯಕ ಇಂಜಿನಿಯರ್(ವಿದ್ಯುತ್), ಸಹಾಯಕ ಲೆಕ್ಕಾಧಿಕಾರಿ ಹಾಗೂ ಸಹಾಯಕ ಹುದ್ದೆಗಳ ಪರಿಷ್ಕೃತ ಅಂತಿಮ ಉತ್ತರಗಳ ಕೀ, ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಅಂಕಗಳು/Equi-percentile, ಪರಿಷ್ಕೃತ 1:2 ರ ಅನುಪಾತದ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

**ಉಲ್ಲೇಖ:**
1. ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/40360/2016–17 ದಿನಾಂಕ: 08.09.2016.
2. ಆನ್‌ಲೈನ್ ಸ್ಪರ್ಧಾತ್ಮಕ ಪರೀಕ್ಷೆಯ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/40360/2016–17 ದಿನಾಂಕ: 23.06.2017.
3. ಆನ್ ಲೈನ್ ಸ್ಪರ್ಧಾತ್ಮಕ ಪರೀಕ್ಷೆಯ ಪ್ರಶ್ನೆ/ಉತ್ತರಗಳಿಗೆ ಆಕ್ಷೇಪಿಸುವ ಬಗ್ಗೆ ಹೊರಡಿಸಿದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/40360/2016–17 ದಿನಾಂಕ: 14.07.2017.
4. ಆನ್‌ಲೈನ್ ಸ್ಪರ್ಧಾತ್ಮಕ ಪರೀಕ್ಷೆಯ ಅಂತಿಮ ಉತ್ತರಗಳ ಕೀ ಮತ್ತು 1:2 ಅನುಪಾತದ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿ ಹೊರಡಿಸಿದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/40360/2016–17 ದಿನಾಂಕ: 23.08.2017 ಮತ್ತು 30.08.2017.

*****

ಸಹಾಯಕ ಇಂಜಿನಿಯರ್(ವಿ), ಸಹಾಯಕ ಲೆಕ್ಕಾಧಿಕಾರಿ ಮತ್ತು ಸಹಾಯಕ ಹುದ್ದೆಗಳಿಗೆ ದಿನಾಂಕ: 07.07.2017 ರಿಂದ 11.07.2017 ರವರೆಗೆ ನಡೆದ ಆನ್‌ಲೈನ್ ಮುಖಾಂತರ ನಡೆಸಲಾದ ಸ್ಪರ್ಧಾತ್ಮಕ ಪರೀಕ್ಷೆಗಳ ಅಂತಿಮ ಉತ್ತರಗಳ ಕೀ, ಪಡೆದ ಅಂಕಗಳು ಮತ್ತು 1:2 ಅನುಪಾತದ ಅಭ್ಯರ್ಥಿಗಳ ಪಟ್ಟಿ ಹಾಗೂ ಕಟ್–ಆಫ್ ಅಂಕಗಳು/ Equi-percentile ಅನ್ನು ದಿನಾಂಕ: 23.08.2017 ಮತ್ತು 30.08.2017 ರ ಅಧಿಸೂಚನೆಯಲ್ಲಿ ಪ್ರಕಟಿಸಲಾಗಿತ್ತು.

ಆದರೆ ತದನಂತರ ಹಲವಾರು ಅಭ್ಯರ್ಥಿಗಳು ಮನವಿ ಪತ್ರಗಳನ್ನು ಸಲ್ಲಿಸುತ್ತಾ, ಕೀ ಉತ್ತರಗಳಿಗೆ ಪೂರಕ ದಾಖಲೆಗಳೊಂದಿಗೆ ಸಲ್ಲಿಸಿದ್ದ ಆಕ್ಷೇಪಣೆಗಳನ್ನು ಪರಿಗಣಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ. **ಆದಾಗ್ಯೂ ಹಲವು ಆಕ್ಷೇಪಣೆಗಳು ಪುನಃ ಪರಿಶೀಲಿಸಲು ಅರ್ಹವಾಗಿದ್ದು, ಅಂತಹ ಆಕ್ಷೇಪಣೆಗಳನ್ನು ಮರುಪರೀಕ್ಷಿಸಲಾಗಿರುತ್ತದೆ ಮತ್ತು ಸಹಾಯಕ ಇಂಜಿನಿಯರ್(ವಿ), ಸಹಾಯಕ ಲೆಕ್ಕಾಧಿಕಾರಿ ಮತ್ತು ಸಹಾಯಕ ಹುದ್ದೆಗಳಿಗೆ ನಡೆದ ಆನ್‌ಲೈನ್ ಸ್ಪರ್ಧಾತ್ಮಕ ಪರೀಕ್ಷೆಯ ಕೆಲವು ಪ್ರಶ್ನೆಗಳ ಅಂತಿಮ ಉತ್ತರಗಳ ಕೀಗಳನ್ನು ಪರಿಷ್ಕರಿಸಲಾಗಿರುತ್ತದೆ. ಆದ್ದರಿಂದ ಅಂಕಗಳು ಮತ್ತು** Equi-percentile **ಸಹಾ ಪರಿಷ್ಕೃತಗೊಂಡಿರುವ ಹಿನ್ನಲೆಯಲ್ಲಿ, ಈಗಾಗಲೇ ಸಹಾಯಕ ಇಂಜಿನಿಯರ್(ವಿ) ಮತ್ತು ಸಹಾಯಕ ಲೆಕ್ಕಾಧಿಕಾರಿ ಹುದ್ದೆಗಳಿಗೆ ಸಂಬಂಧಿಸಿದಂತೆ ದಿನಾಂಕ: 23.08.2017 ರ ಅಧಿಸೂಚನೆಯಲ್ಲಿ ಪ್ರಕಟಿಸಲಾಗಿದ್ದ 1:2 ಅನುಪಾತದ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಹಾಗೂ ಸಹಾಯಕ ಹುದ್ದೆಗೆ ಸಂಬಂಧಿಸಿದಂತೆ ದಿನಾಂಕ: 30.08.2017 ರ ಅಧಿಸೂಚನೆಯಲ್ಲಿ ಪ್ರಕಟಿಸಲಾಗಿದ್ದ 1:2 ಅನುಪಾತದ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಹಿಂಪಡೆದು, ಪರಿಷ್ಕೃತ ಉತ್ತರಗಳ ಕೀಗಳನ್ನು** (Revised answer Keys) ಕವಿಪ್ರನಿನಿ ಹಾಗೂ ಸಂಬಂಧಿಸಿದ ಕಂಪನಿಗಳ ವೈಬ್‌ಸೈಟ್‌ನಲ್ಲಿ (www.kptcl.com, www.bescom.org, www.cescmysore.org, www.hescom.co.in, and www.gescom.in) ಅನುಬಂಧ–1 ರಲ್ಲಿ ಲಭ್ಯಪಡಿಸಲಾಗಿದೆ. ಅಭ್ಯರ್ಥಿಗಳು ಸಂಬಂಧಿಸಿದ ಕಂಪನಿಯ ವೈಬ್‌ಸೈಟ್‌ನಲ್ಲಿ ತಮ್ಮ ಅರ್ಜಿ ಸಂಖ್ಯೆ ಮತ್ತು ಜನ್ಮದಿನಾಂಕದೊಂದಿಗೆ ಲಾಗ್‌ಆನ್ ಮಾಡುವುದರೊಂದಿಗೆ ತಾವು ಗಳಿಸಿದ ಪರಿಷ್ಕರಿಸಿದ ಅಂಕಗಳು/Equi-percentile ನ್ನು ವೀಕ್ಷಿಸಬಹುದಾಗಿರುತ್ತದೆ.

ಮುಂದುವರೆದು ಅಭ್ಯರ್ಥಿಗಳ ಮೂಲ ದಾಖಲಾತಿಗಳ ಪರಿಶೀಲನೆಯ ಉದ್ದೇಶಕ್ಕಾಗಿ ಸಹಾಯಕ ಇಂಜಿನಿಯರ್(ವಿದ್ಯುತ್), ಸಹಾಯಕ ಲೆಕ್ಕಾಧಿಕಾರಿ ಹಾಗೂ ಸಹಾಯಕ ಹುದ್ದೆಗಳ ಪ್ರಕಟಿತ ಹುದ್ದೆಗಳಿಗನುಗುಣವಾಗಿ 1:2 ರ ಅನುಪಾತದ ಪರಿಷ್ಕೃತ ಅಭ್ಯರ್ಥಿಗಳ ಪಟ್ಟಿಯನ್ನು ಅನುಬಂಧ–2 ರಲ್ಲಿ ಹಾಗೂ ಪರಿಷ್ಕೃತ ಕಟ್–ಆಫ್ ಅಂಕಗಳು/Equi-percentile ಅನ್ನು ಅನುಬಂಧ–3 ರಲ್ಲಿ ಪ್ರಕಟಿಸಲಾಗಿದೆ.

ಸದರಿ 1:2 ರ ಅನುಪಾತದ ಪಟ್ಟಿಯು ಆಯ್ಕೆ ಪಟ್ಟಿಯಾಗಿರುವುದಿಲ್ಲ. ಮೂಲ ದಾಖಲಾತಿಗಳ ಪರಿಶೀಲನೆ ದಿನಾಂಕವನ್ನು ಶೀಘ್ರದಲ್ಲಿಯೇ ಪ್ರಕಟಿಸಲಾಗುವುದು.

**ಕಿರಿಯ ಇಂಜಿನಿಯರ್(ವಿದ್ಯುತ್/ಸಿವಿಲ್) ಮತ್ತು ಕಿರಿಯ ಸಹಾಯಕ ಹುದ್ದೆಗಳಿಗೆ ಈಗಾಗಲೇ ಪ್ರಕಟಿಸಲಾಗಿದ್ದ ಅಂತಿಮ ಉತ್ತರಗಳ ಕೀ, ಪಡೆದ ಅಂಕಗಳು/**Equi-percentile **ಮತ್ತು 1:2 ಅನುಪಾತದ ಅಭ್ಯರ್ಥಿಗಳ ಪಟ್ಟಿ/ಕಟ್–ಆಫ್ ಅಂಕಗಳು/** Equi-percentile **ನಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.**

**ನಿರ್ದೇಶಕರು**
**(ಆಡಳಿತ ಮತ್ತು ಮಾನವ ಸಂಪನ್ಮೂಲ)**
**ನಿಗಮ ಕಾರ್ಯಾಲಯ, ಕವಿಪ್ರನಿನಿ,**
**ಕಾವೇರಿ ಭವನ, ಬೆಂಗಳೂರು.**